ಅಪಗೊಳ ಪಾದಗಳಿಗೆ ಅಡ್ಡಬಿದ್ದು, ಮಠದ ವತಿಯಿಂದ ಸನ್ಮಾನ ಸ್ವೀಕರಿಸಿ, ಪಕ್ಕದಲ್ಲಿದ್ದ ಶಾಲೆಯ ಆವರಣದೊಳಗೆ ಅಡಿಯಿಟ್ಟರು. ಅಪಗೊಳನ್ನೊಳಗೊಂಡಂತೆ ಬಿ.ಇ.ಒ ಸಾಹೇಬರನ್ನು ಹಿಂಬಾಲಿಸಿ ಒಳಬಂದ ಎಲ್ಲರೂ ಎದುರು ಕಂಡ ದೃಶ್ಯದಿಂದ ಒಂದು ಕ್ಷಣ ದಂಗುಬಡಿದವರಂತೆ ನಿಂತರು. ಶಾಲೆಯ ಆವರಣದ ಒಂದು ಮಗ್ಗುಲಲ್ಲಿ ಕೇರಿಯ ಮಕ್ಕಳನ್ನು ಸಾಲಾಗಿ ಕೂಡಿಸಿ ಕೈಯಲ್ಲಿ ಕತ್ತರಿ ಹಿಡಿದಿದ್ದ ದೊಕಾಚಿ ಮೇಷ್ಟ್ರು ಅವರ ತಲೆಗೂದಲನ್ನು ಬೋಳಿಸುವ ಕೆಲಸದಲ್ಲಿ ಮಗ್ನರಾಗಿದ್ದರು. ಅಪಗೊಳ ಮುಖ ನಖಶಿಖಾಂತ ಉರಿಯುತ್ತಿತ್ತು. ಹೆಡ್‌ಮಾಸ್ತರ್ ರೇವಣ್ಣ ಪಾಟೀಲರು ದೊಕಾಚಿ ಮೇಷ್ಟ್ರ ಈ ಕಾರ್ಯತಂತ್ರದ ಅರಿವಿಲ್ಲದೆ ಬೆಚ್ಚಿ ಬಿದ್ದಿದ್ದರು. ಆಡಳಿತ ಮಂಡಳಿಗೆ ಅದು ಮಠದ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಈ ಎಲ್ಲದರ ನಡುವೆ ಬಿ.ಇ.ಒ ಸಾಹೇಬರು ಮಾತ್ರ ತುಂಬ ಶಾಂತರಾಗಿದ್ದು ಆ ಸನ್ನಿವೇಶವನ್ನು ಖುಷಿಯಿಂದ ಆಸ್ವಾದಿಸುತ್ತಿರುವಂತೆ ಕಾಣಿಸುತ್ತಿತ್ತು. ಕೇರಿಯ ಸಂಕಷ್ಟದ ಬದುಕನ್ನು ಸ್ವತಃ ಅನುಭವಿಸಿ ಗೊತ್ತಿದ್ದ ಅವರಿಗೆ ದೊಕಾಚಿ ಮೇಷ್ಟ್ರು ರೂಪಿಸಿದ ಈ ಕಾರ್ಯಯೋಜನೆ ಮನಸ್ಸಿಗೆ ಹಿಡಿಸಿತಲ್ಲದೆ ಅವರೊಳಗೊಬ್ಬ ಬುದ್ಧ, ಬಸವ, ಗಾಂಧಿ, ಅಂಬೇಡ್ಕರನ್ನು ಕಂಡಷ್ಟೆ ಖುಷಿಯಾಯಿತು ಮತ್ತು ಅದನ್ನು ಎಲ್ಲರೆದುರು ಹೇಳಿ ಬಾಯಿತುಂಬ ಹೊಗಳಿದರು ಕೂಡ. ಆ ಕೂಡಲೇ ಅಪ್ಪಣ್ಣನನ್ನು ಕರೆಕಳುಹಿಸಿ ಇನ್ನು ಮುಂದೆ ಕೇರಿಯವರಿಗೂ ಅವನು ಕ್ಷೌರ ಮಾಡಬೇಕೆಂದು ಈ ವಿಷಯವಾಗಿ ತಹಶೀಲ್ದಾರರಿಗೂ, ಜಿಲ್ಲಾಧಿಕಾರಿಗಳಿಗೂ ಪತ್ರ ಬರೆಯುವುದಾಗಿ ಹೇಳಿ ತಪ್ಪಿದ್ದಲ್ಲಿ ಕೋರ್ಟಿನಲ್ಲಿ ಕೇಸು ದಾಖಲಿಸುವುದಾಗಿ ಫರ್ಮಾನು ಹೊರಡಿಸಿದರು. ಶಾಲೆಯ ಸಣ್ಣ ಕಾರ್ಯಕ್ರಮವೊಂದು ಊರಿನ ಸಮಸ್ಯೆಯನ್ನು ಬಗೆಹರಿಸುವ ವೇದಿಕೆಯಾಗುತ್ತದೆಂದು ಯಾರೂ ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಬಿ.ಇ.ಒ ಸಾಹೇಬರು ಕಾರ್ಯಕ್ರಮ ಮುಗಿಸಿ ಹೋಗುವಾಗ ದೊಕಾಚಿ ಮೇಷ್ಟ್ರ ಕಿವಿಯಲ್ಲಿ ಯಾರಿಗೂ ಕೇಳಿಸದಂತೆ ಮೆಲ್ಲನೆ ಉಸಿರಿದ್ದರು, 'ಮೇಷ್ಟ್ರೆ ಒಂದು ಛಂದದ ಹೆಸರು ಹುಡುಕಿ ಕೊಡಿ, ನಂಗೂ ಬದಲಿಸಿಕೊಳ್ಳಬೇಕಿದೆ' ಎಂದು.

ಊರಿಗೆ ಕಂಟಕಪ್ರಾಯವಾದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಶಾಂತವೀರಪ್ಪಗೌಡರ ಮನೆಯಲ್ಲಿ ಅಪಗೊಳ ನೇತೃತ್ವದಲ್ಲಿ ಸಭೆ ಕರೆಯಲಾಗಿತ್ತು. ದೊಕಾಚಿ ಮೇಷ್ಟ್ರು ಸಭೆಗೆ ಬಂದವರೆ ಅಪಗೊಳಿಗೆ ನಿಂತೇ ನಮಸ್ಕರಿಸಿ ಎದುರು ಸಾಲಿನಲ್ಲಿದ್ದ ಕುರ್ಚಿಯಲ್ಲಿ ಆಸೀನರಾದರು. ಊರಿನಲ್ಲಿ ಈ ಮೊದಲಿನ ಯಥಾಸ್ಥಿತಿಯನ್ನೆ ಕಾಯ್ದುಕೊಂಡು ಹೋಗುವುದೆಂದು, ಬಿ.ಇ.ಒ ಸಾಹೇಬರ ಮನವೊಲಿಸಿ ದೂರನ್ನು ಹಿಂಪಡೆಯುವಂತೆ ಮಾಡುವ ಜವಾಬ್ದಾರಿ ದೊಕಾಚಿ ಮೇಷ್ಟ್ರಿಗೆ ಸೇರಿದ್ದೆಂದು, ಇನ್ನು ಮುಂದೆ ಇಂಥ ಅನುಚಿತ ಘಟನೆ ನಡೆಯದಂತೆ ನೋಡಿಕೊಳ್ಳಬೇಕು, ಒಂದು ವೇಳೆ ಮಠದ ಪ್ರತಿಷ್ಠೆಗೆ ಕುಂದಾಗುವಂತೆ ವರ್ತಿಸಿದಲ್ಲಿ ನೌಕರಿಯಿಂದ ವಜಾಗೊಳಿಸಲಾಗುವುದೆಂದು ಸಭೆಯಲ್ಲಿ ಠರಾವು ಹೊರಡಿಸಲಾಯಿತು. ಸಭೆಯಲ್ಲಿನ ಎಲ್ಲ ಸದಸ್ಯರೂ ಅಪಗೊಳ ಈ ನಿರ್ಧಾರವನ್ನು ಒಕ್ಕೊರಲಿನಿಂದ ಅನುಮೋದಿಸಿದರು. ಈ ನಿರ್ಧಾರದ ಕುರಿತು ಸಭೆ ದೊಕಾಚಿ ಮೇಷ್ಟ್ರ ಅಭಿಪ್ರಾಯ ಕೇಳಿದಾಗ, ತಿಳಿವಳಿಕೆಯೇ ಇಲ್ಲದ ಈ ತಿರಕ್ಲಾಂಡಿಗಳೆದುರು ವಾದಿಸುವುದು ವ್ಯರ್ಥ ಕಾಲಹರಣವೆಂದು ಬಗೆದ ಮೇಷ್ಟ್ರು ಯಾವ ಪ್ರತ್ಯುತ್ತರವನ್ನೂ ನೀಡದೆ ಗಂಭೀರವಾಗಿ ಕುಳಿತೆ ಇದ್ದರು. ಅವರ ಈ ಮೌನವನ್ನೆ ಒಪ್ಪಿಗೆಯೆಂದು ಭಾವಿಸಿದ ಸಭೆಯು ಉಪ್ಪಿಟ್ಟು ಚಹಾದ ಸಮಾರಾಧನೆಯ ನಂತರ ಬರಖಾಸ್ತುಗೊಂಡಿತು. ಈ ನಡುವೆ ಬಿ.ಇ.ಒ ಸಾಹೇಬರು ಬೇರೆ ತಾಲ್ಲೂಕಿಗೆ ವರ್ಗಾವಣೆಗೊಂಡು ತಮ್ಮ ಕಾರ್ಯಭಾರದ ಗಡಿಬಿಡಿಯಲ್ಲಿ ದೊಕಾಚಿ ಮೇಷ್ಟ್ರ ಕ್ರಾಂತಿಯ ಯೋಜನೆಯನ್ನು ಸಂಪೂರ್ಣವಾಗಿ ಮರೆತು ಬಿಟ್ಟರು. ಪರಿಣಾಮವಾಗಿ ಕೇರಿಯವರ ತಲೆಕ್ಷೌರದ ಸಮಸ್ಯೆ ಯಾವ ಬದಲಾವಣೆಯನ್ನೂ ಕಾಣದೆ ಯಥಾಸ್ಥಿತಿ ಮುಂದುವರೆಯಿತು.

★★★